ಒ.ಎಸ್. ನಂ.191/2016
ಡಿಡಬ್ಲು-1

ದಿನಾಂಕ 19.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ವಾಟಿ ಸವಾಲುಃ ವಾದಿ ಪರ ವಕೀಲರಿಂದ**

ನನ್ನ ಗಂಡ ಮೃತಪಟ್ಟು 18 ವರ್ಷಗಳಾಗಿರುತ್ತವೆ. ಸರ್ವೆ ನಂ.150 ರಲ್ಲಿ ಒಟ್ಟು 21-ಎಕರೆ ಜಮೀನು ಇರುತ್ತದೆ. ಸದರಿ ಜಮೀನು ಮೊದಲು ನನ್ನ ಗಂಡನ ತಂದೆಯ ಹೆಸರಿನಲ್ಲಿತ್ತು. ಗಂಡನ ಆಸ್ತಿ ಯಾವಾಗ ಬಂತು ಎಂದರೆ ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳ ಕಾಲ ದಾವಾಸ್ತಿ ನನ್ನ ಗಂಡನ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ 2010 ರವರೆಗೆ ಇತ್ತು ಎಂದು ಹೇಳುತ್ತಾರೆ. 1993-94 ರಲ್ಲಿ ದಾವಾಸ್ತಿ ನನ್ನ ಗಂಡನು ನನ್ನ ಹೆಸರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1993 ರಿಂದ 2010 ರವರೆಗೆ ದಾವಾಸ್ತಿ ನನ್ನ ಹೆಸರಿಗಿತ್ತು ಎಂದರೆ ಸಾಕ್ಷಿ ಸರಕಾರದ ಸೌಲಭ್ಯ ಪಡೆಯಲು ನನ್ನ ಗಂಡ ನನ್ನ ಹೆಸರಿಗೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಾವಾಸ್ತಿ 12-ಎಕರೆ ಜಮೀನು ನನ್ನ ಹೆಸರಿಗೆ ಆದಾಗಿನಿಂದ ನಾನೆ ಮಾಲಿಕಳು ಮತ್ತು ಕಬ್ಜೆದಾರಳಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡ ಸೇರಿ ಟ್ರ್ಯಾಕ್ಟರ ಸಾಲ ಮಾಡಿರುತ್ತೇವೆ ಎಂದರೆ ನನಗೆ ನೆನಪಿಲ್ಲ. ನಾನು ನನ್ನ ಗಂಡ ಸೇರಿ ಟ್ರ್ಯಾಕ್ಟರ ಸಾಲ ಮಾಡಿದ ಬಗ್ಗೆ ಕಾಗದ ಪತ್ರ ಸಲ್ಲಿಸಿರುತ್ತೇನೆ ಅದರಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿಯಲ್ಲ.

2ನೆ ಪ್ರತಿವಾದಿ ಮದುವೆಯಾಗಿ ತನ್ನ ಗಂಡನ ಮನೆಯಲ್ಲಿರುತ್ತಾಳೆ ಎಂದರೆ ಸರಿ. 2ನೆ ಪ್ರತಿವಾದಿಗೆ 03 ಜನ ಮಕ್ಕಳಿರುತ್ತಾಳೆ. 2010 ರಲ್ಲಿ 2 ರಿಂದ 6ನೆ ಪ್ರತಿವಾದಿಯರು ಅಪ್ರಾಪ್ತ ವಯಸ್ಸಿನವರಿದ್ದರು ಎಂದರೆ ಸರಿ. ನನ್ನ ಗಂಡ ಮೃತಪಟ್ಟ ನಂತರ ಟ್ರ್ಯಾಕ್ಟರ ಸಾಲದ ಹೊರೆ ಹಾಗೂ ಕುಟುಂಬದ ಜವಾಬ್ದಾರಿ ನನ್ನ ಮೇಲೆ ಇತ್ತು ಎಂದರೆ ಸಾಕ್ಷಿ ನಾನು ನನ್ನ ಮಕ್ಕಳು ಕೂಡಿ ಜವಾಬ್ದಾರಿ ನಿರ್ವಹಣೆ ಮಾಡಿರುತ್ತೇವೆ ಎಂದು ಹೇಳುತ್ತಾರೆ. 2ನೆ ಪ್ರತಿವಾದಿ 5ನೆ ತರಗತಿವರೆಗೆ ಶಾಲೆ ಕಲಿತಿರುತ್ತಾರೆ. 3ನೆ ಶಾಲೆ ಕಲಿತಿಲ್ಲ. 4 ಮತ್ತು 5ನೆ ಪ್ರತಿವಾದಿ ಶಾಲೆ ಕಲಿತಿರುತ್ತಾರೆ. 6ನೆ ಪ್ರತಿವಾದಿ 5ನೇ ತರಗತಿವರೆಗೆ ಶಾಲಿ ಕಲಿತಿರುತ್ತಾರೆ. 2 ರಿಂದ 6ನೆ ಪ್ರತಿವಾದಿಯರಿಗೆ ಅವರ ದೊಡ್ಡಪ್ಪ ಶಾಲೆ ಕಲಿಸಿರುತ್ತಾರೆ.

ದಾವಾಸ್ತಿಯು ನನ್ನ ಗಂಡನ ಪಾಲಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ನಾನು, ನನ್ನ ಗಂಡ ಕೂಡಿ ಸಾಗುವಳಿ ಮಾಡಿರುತ್ತೇವೆ ಎಂದು ಹೇಳುತ್ತಾರೆ. ದಿನಾಂಕ 06.02.2002 ರಂದು ಸರ್ವೆ ನಂ.150/2 ರಲ್ಲಿ 02-ಎಕರೆ ಜಮೀನನ್ನು ರೂ.40,000/- ಗಳಿಗೆ ಜೈರಾಬಿ ಗಂಡ ಯಾಸಿನಸಾಬರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರ

ವ್ಯವಹಾರದಲ್ಲಿ ಶಿವಮಾನಪ್ಪ, ಬಸವರಾಜ, ರೇವಣ್ಣ, ಯುಸೂಪಸಾಬರವರು ಸಾಕ್ಷಿದಾರರಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸರ್ವೆ ನಂ.150/2 ರಲ್ಲಿ 02-ಎಕರೆ ಜಮೀನನ್ನು ರೂ.46,000/- ಗಳಿಗೆ ಸುಕ್ರುಸಾಬ ತಂದೆ ಖಾಸಿಮಸಾಬರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಎರಡು ಖರೀದಿ ಪತ್ರಗಳಿಗೆ ನಾನೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 19.08.2014 ರಂದು ಸರ್ವೆ ನಂ.150/1 ರಲ್ಲಿ 01-ಎಕರೆ ಜಮೀನನ್ನು ರೂ.71,000/- ಗಳಿಗೆ ಯಾಸೀನಸಾಬ ತಂದೆ ಖಾಸಿಂಸಾಬರವರಿಗೆ ನೀವೆ ಮಾರಾಟ ಮಾಡಿರುತ್ತೀರಿ ಎಂದರೆ ಸರಿ. ದಿನಾಂಕ 13.04.2015 ರಂದು ಸರ್ವೆ ನಂ.150/2 ರಲ್ಲಿ 35-ಗುಂಟೆ ಜಮೀನನ್ನು ರೂ.85,000/- ಗಳಿಗೆ ಉಸ್ಮಾನಸಾಬ ತಂದೆ ಸುಕ್ರುಸಾಬ ಚೌದ್ರಿರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮಕ್ಕಳಿಗೆ ಜಮೀನುಗಳ ಮಾರಾಟ ಮತ್ತು ಅಡಮಾನ ಮಾಡಿದ ಬಗ್ಗೆ ನಾನು ಹೇಳಿಲ್ಲ. ಟ್ರ್ಯಾಕ್ಟರ ಸಾಲ ತೀರಿಸಲು ಮತ್ತು ಮಗಳ ಮದುವೆ ಮಾಡಲು ಸಾಲ ಮಾಡಿದ್ದರಿಂದ ಜಮೀನುಗಳನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-23 ರಲ್ಲಿ ನನ್ನ ಭಾವಚಿತ್ರ ಇದೆ ಎಂದರೆ ಸಾಕ್ಷಿ ಟ್ರ್ಯಾಕ್ಟರ ಸಾಲ ತೀರಿಸುತ್ತೇನೆ ಎಂದು ಮೋಸದಿಂದ ಸಾಯಂಕಾಲ 5.00 ಗಂಟೆಗೆ ಸ್ಟೇಟ ಬ್ಯಾಂಕ ಆಫ ಹೈದರಾಬಾದ ಬ್ಯಾಂಕನಲ್ಲಿ ನನ್ನ ಭಾವಚಿತ್ರವನ್ನು ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಖರೀದಿ ಪತ್ರದಲ್ಲಿ 5-6 ಸಹಿಗಳನ್ನು ಮಾಡಿರುತ್ತೇನೆ ಎಂದರೆ ಸಾಕ್ಷಿ ಟ್ರ್ಯಾಕ್ಟರ ಸಾಲ ಕಟ್ಟುತ್ತೇವೆ ಎಂದು ಮೋಸದಿಂದ ನನ್ನ ಸಹಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ದಿನಾಂಕ 14.09.2010 ರಂದು ಸರ್ವೆ ನಂ.150 ರಲ್ಲಿ 04-ಎಕರೆ ಜಮೀನನ್ನು ರೂ.1,60,000/- ಗಳಿಗೆ 1ನೆ ಪ್ರತಿವಾದಿಗೆ ಉಪ ನೊಂದಣಿ ಕಚೇರಿ ಜೇವರ್ಗಿಯಲ್ಲಿ ಖರಿದಿ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಟ್ರ್ಯಾಕ್ಟರ ಸಾಲ ತುಂಬುತ್ತೇನೆ ಎಂದು ಹೇಳಿ ಮೋಸದಿಂದ ಭಾವಚಿತ್ರ ತೆಗೆದುಕೊಂಡಿರುತ್ತಾರೆ. ನಾನು ಶಾಲೆ ಕಲಿಯದ ಕಾರಣ ಮತ್ತು ನನಗೆ ವ್ಯವಹಾರ ಗೊತ್ತಾಗದ ಕಾರಣ ಮೋಸದಿಂದ ಖರೀದಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಅದೇ ದಿನ ಮಲ್ಲಿಕಾರ್ಜುನ ತಂದೆ ಶರಣಪ್ಪರವರಿಗೆ ಸದರಿ ಜಮೀನಿನಲ್ಲಿ 02-ಎಕರೆ ಜಮೀನು ನೊಂದಾಯಿತ ಮಾರಾಟ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಟ್ರ್ಯಾಕ್ಟರ ಸಾಲ ತುಂಬುತ್ತೇನೆ ಎಂದು ಹೇಳಿ ಮೋಸದಿಂದ ಭಾವಚಿತ್ರ ತೆಗೆದುಕೊಂಡಿರುತ್ತಾರೆ. ಯಾಸಿನಸಾಬ ಮತ್ತು ಸುಕ್ರುಸಾಬರವರಿಗೆ ಬರೆದುಕೊಟ್ಟ ಮಾರಾಟ ಪತ್ರಗಳು ಮೋಸದಿಂದ ಖರೀದಿ ಮಾಡಿಕೊಂಡಿರುತ್ತಾರೆಯೇ ಎಂದರೆ ಸಾಕ್ಷಿ ಅವರಿಗೆ ನಾನೆ ಬರೆದುಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ.

ತಹಸೀಲ್ದಾರರರಿಗೆ, ಉಪ ನೊಂದಣಾಧಿಕಾರಿಗೆ ಮತ್ತು ಪೋಲಿಸರಿಗೆ ಅರ್ಜಿಯನ್ನು ನೀವು ಬರೆದಿರುತ್ತೀರಾ ಎಂದರೆ ಸಾಕ್ಷಿ ನಾನು ವಕೀಲರ ಮುಖಾಂತರ ಬರೆಸಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು 1ನೆ ಪ್ರತಿವಾದಿಗೆ ಮತ್ತು ಮಲ್ಲಿಕಾರ್ಜುನ ಎನ್ನುವವರಿಗೆ ಖರಿದಿ ಪತ್ರ ಮಾಡಿದ ಮೇಲೆ ಮುಟೇಷನ ಆಗಿ ಅವರ ಹೆಸರಿಗೆ ಪಹಣಿ ಆಗಿದ್ದು ಅವರೆ ಸಾಗುವಳಿ ಮತ್ತು ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನೆ ಸದರಿ ಜಮೀನಿನಲ್ಲಿ ಕಬ್ಜೆಯಲ್ಲಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯಲ್ಲಿ ನಾನೆ ಕಬ್ಜೆಯಲ್ಲಿರುತ್ತೇನೆ ಎಂದು ಕಾಗದ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ನಾನು ಮಾರಾಟ ಪತ್ರವಾದ ಒಂದು ವರ್ಷದ ನಂತರ ನಾನು ತಿಮ್ಮಾಪೂರ ವಕೀಲರಿಗೆ ಭೇಟಿಯಾಗಿರುತ್ತೇನೆ. ನಾನು ನನ್ನ ಮಕ್ಕಳು ಸೇರಿ ಮೋಸ ಮಾಡಿರುತ್ತಾರೆ ಎಂದು ತಿಮ್ಮಾಪೂರ ವಕೀಲರಿಗೆ ಭೇಟಿಯಾಗಿ ದಾವೆ ಸಲ್ಲಿಸುವಂತೆ ಹೇಳಿರುತ್ತೇವೆ. ನಾನು ಸ್ವತಂತ್ರವಾಗಿ ಮಾರಾಟ ಪತ್ರಗಳನ್ನು ಪ್ರಶ್ನಿಸಿ ದಾವೆ ಮಾಡಿರುತ್ತೇನೆ ಎಂದರೆ ಸಾಕ್ಷಿ ನಾನು ಹಾಕಿರುತ್ತೇನೆ ಮತ್ತು ನನ್ನ ಮಕ್ಕಳು ಸಹ ದಾವೆ ಹಾಕಿರುತ್ತೇವೆ ಎಂದು ಹೇಳುತ್ತಾರೆ. ದಾವಾಸ್ತಿಗಳನ್ನು ನನ್ನ ಪ್ರಾಂಪಚಿಕ ಅಡಚಣೆಗೋಸ್ಕರ ಮತ್ತು ಬ್ಯಾಂಕ ಸಾಲ ಮತ್ತು ಮಕ್ಕಳ ವಿದ್ಯಾಬ್ಯಾಸ ಮತ್ತು ಮದುವೆ ಸಲುವಾಗಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಯ ಮೌಲ್ಯ ಹೆಚ್ಚಾಗಿರುವುದರಿಂದ ದುರಾಸೆಯಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಜಮೀನುಗಳು ಮೋಸದಿಂದ ಮಾರಾಟ ಮಾಡಿರುತ್ತಾರೆ ಎಂದರೆ ಪ್ರತಿವಾದಿಯರ ಮೇಲೆ ಸಿಸಿ ನಂ.190/2013 ಕೇಸು ಮಾಡಿರುತ್ತೇನೆ. ಸದರಿ ಪ್ರಕರಣ ಖುಲಾಸೆಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ